" ಯುವಜನತೆಗೆ
ಮಾದರಿ
ವ್ಯಕ್ತಿತ್ವ!



# Brilliance Success Progress

**ಬಿ.ಎಸ್.ಪ್ರಶಾಂತ್**

ವ್ಯವಸ್ಥಾಪಕ ನಿರ್ದೇಶಕರು

ಸೇಫ್ ವ್ಹೀಲ್ಸ್ ಗ್ರೂಪ್ ಆಫ್ ಕಂಪನೀಸ್

ನೀವು ಒಬ್ಬರಿಗೆ ಉದ್ಯೋಗ ನೀಡಿದರೆ ಅವರಿಗೆ ಜೀವನ ನೀಡಿದಂತೆ.
ಅದೇ ಒಬ್ಬರನ್ನು ಸಶಕ್ತಗೊಳಿಸಿದರೆ ಅವರ ಜೀವನವನ್ನೇ ಬದಲಾಯಿಸಿದಂತೆ!

ಜಿ.ಎಸ್.ಪಿ. ಎಂದೇ ಕರೆಯಲ್ಪಡುವ ಜಿ.ಎಸ್.ಪ್ರಶಾಂತ್ ಅವರ ಹೆಸರು ಮೈಸೂರಿನ ಪ್ರವಾಸೋದ್ಯಮ ಕ್ಷೇತ್ರದಲ್ಲಿ ಚಿರಪರಿಚಿತ. ತನ್ನ ಜೀವನದ ಹಾದಿಯಲ್ಲಿ ಜೊತೆಗೆ ನಡೆದುಬರುವವರನ್ನು ಸಬಲರನ್ನಾಗಿಸುವ, ಸಶಕ್ತಗೊಳಿಸುವ ಅಪರೂಪದ ವ್ಯಕ್ತಿತ್ವವುಳ್ಳ ಇವರು ಸದ್ಯ ಸೇಫ್ ವ್ಹೀಲ್ಸ್ ಗ್ರೂಪ್ ಆಫ್ ಕಂಪನೀಸ್‌ನ ವ್ಯವಸ್ಥಾಪಕ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. 1999 ರಿಂದ ಮೈಸೂರಿನ ಜನಮನದಲ್ಲಿ ಚಿರಪರಿಚಿತವಾಗಿರುವ ಸೇಫ್ ವ್ಹೀಲ್ಸ್ ಸಂಸ್ಥೆ ಪ್ರಶಾಂತ್ ಅವರ ಕನಸಿನ ಕೂಸು.

22 ವರ್ಷಗಳ ಹಿಂದೆ ಈ ಕ್ಷೇತ್ರಕ್ಕೆ ಪಾದಾರ್ಪಣೆ ಮಾಡಿದ ಜಿ.ಎಸ್.ಪ್ರಶಾಂತ್ ಅವರು ಅದಾಗಲೇ ಒಂದು ಸ್ಪಷ್ಟ ಗುರಿ ಹೊಂದಿದ್ದರು. ಮೈಸೂರಿನಲ್ಲಿ ಟ್ಯಾಕ್ಸಿ ಸೇವೆಯ ಅಭಾವ ಇದ್ದುದರ ಬಗ್ಗೆ ಅರಿತಿದ್ದ ಅವರು, ಜನರಿಗೆ ಸುರಕ್ಷಿತ, ಸುಸಜ್ಜಿತ ಟ್ಯಾಕ್ಸಿ ಸೇವೆ ಒದಗಿಸಬೇಕು ಎಂಬ ನಿಟ್ಟಿನಲ್ಲಿ **ಸೇಫ್ ವ್ಹೀಲ್ಸ್ ಸಂಸ್ಥೆ** ಆರಂಭಿಸಿದರು. ಅತ್ಯಂತ ಸಣ್ಣ ಮಟ್ಟದಲ್ಲಿ ಕೆಲವೇ ಕೆಲವರ ತಂಡದೊಂದಿಗೆ ಆರಂಭವಾದ ಈ ಸಂಸ್ಥೆ ಇಂದು ಮೈಸೂರಿನ ಅತ್ಯಂತ ಪ್ರಮುಖ ಟ್ರಾವೆಲ್ಸ್ ಸಂಸ್ಥೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಸಂಸ್ಥೆಯನ್ನು ಮುನ್ನಡೆಸುತ್ತಿರುವ ನುರಿತ ತಂಡ ಮೈಸೂರಿನ ಜನರಿಗೆ ಅತ್ಯುತ್ತಮ ಹಾಗೂ ವಿಶ್ವಾಸನೀಯ ಸೇವೆ ಒದಗಿಸುತ್ತಾ



ಸೇಫ್ ವ್ಹೀಲ್ಸ್ ಸಂಸ್ಥೆ ಯಶಸ್ವಿಯಾಗುತ್ತಿದ್ದಂತೆಯೇ ಜಿ.ಎಸ್.ಪ್ರಶಾಂತ್ **ಸ್ವಿಸ್ ಟ್ರಿಪ್** ಸಂಸ್ಥೆ ಆರಂಭಿಸಿದರು. ಈ ಮೂಲಕ ಕೇವಲ ಟ್ಯಾಕ್ಸಿ ಕಂಪನಿಯಾಗಿದ್ದ ಸೇಫ್ ವ್ಹೀಲ್ಸ್ ಪ್ರವಾಸೋದ್ಯಮಕ್ಕೂ ಕಾಲಿಟ್ಟಿತು. ವರ್ಷಗಳು ಕಳೆದಂತೆ ಎರಡೂ ಸಂಸ್ಥೆಗಳು ಬೆಳೆಯುತ್ತಾ ಹೋದವು. ತಂಡದ ನಿರಂತರ ಪರಿಶ್ರಮದ ಫಲವಾಗಿ ಈ ಸಂಸ್ಥೆಗಳು ಇಂದು ಮೈಸೂರಿನ ಅತ್ಯಂತ ವಿಶ್ವಾಸಾರ್ಹ ಹಾಗೂ ಜನಪ್ರಿಯ ಟ್ರಾವೆಲ್ ಬಿಜಿನೆಸ್‌ಗಳಾಗಿ ಹೊರಹೊಮ್ಮಿದೆ.



ನಗರದ ಎಲ್ಲ ಟ್ರಾವಲ್ ಏಜೆಂಟ್‌ಗಳನ್ನು ಒಗ್ಗೂಡಿಸುವ ಸಲುವಾಗಿ ಬಿ.ಎಸ್.ಪ್ರಶಾಂತ್ ಮೈಸೂರು ಟ್ರಾವಲ್ಸ್ ಅಸೋಸಿಯೇಷನ್ (ಎಂಟಿಎ) ಆರಂಭಿಸಿದರು. ಈ ಒಕ್ಕೂಟದ ಅಧ್ಯಕ್ಷರಾಗಿ ಬರೋಬ್ಬರಿ ಏಳು ವರ್ಷಗಳ ಕಾಲ ಸೇವೆ ಸಲ್ಲಿಸಿದರು.

ಇದೇ ವೇಳೆ **ಟೂರಿಸಂ ವಿಷನ್ ಗ್ರೂಪ್** ಹಾಗೂ **ಮೈಸೂರು ಟೂರಿಸಂ ಫೋರಂ** ಎಂಬ ಮತ್ತೆರಡು ಸಂಸ್ಥೆಗಳನ್ನು ಆರಂಭಿಸಿದರು. ಈ ಸಂಸ್ಥೆಗಳ ಭಾಗವಾಗಿದ್ದವರೆಲ್ಲರೂ ಪ್ರವಾಸೋದ್ಯಮ ಕ್ಷೇತ್ರದ ಆಳ-ಅಗಲಗಳನ್ನು ಚೆನ್ನಾಗಿ ತಿಳಿದಿದ್ದವರೇ. ಇಲ್ಲಿದ್ದ ಹಿರಿಯರ ಅನುಭವ, ಕಿರಿಯರ ನವೀನ ಯೋಚನೆಗಳ ಪರಿಣಾಮವಾಗಿ ಈ ವೇದಿಕೆಯು ಪ್ರವಾಸೋದ್ಯಮದ ಅಭಿವೃದ್ಧಿಗೆ ತನ್ನದೇ ಆದ ಕೊಡುಗೆ ನೀಡುತ್ತಿದೆ.

ಇದೇ ವೇಳೆ ಬಿ.ಎಸ್.ಪ್ರಶಾಂತ್ ಅವರ ಯೋಚನೆಯಂತೆ ನಡೆದ ಮೈಸೂರು ಟ್ರಾವಲ್ ಮಾರ್ಟ್ ಕಾರ್ಯಕ್ರಮ ಮೈಸೂರಿನ ಪ್ರವಾಸೋದ್ಯಮವನ್ನು ಜಾಗತಿಕ ಮಟ್ಟದಲ್ಲಿ ಪ್ರಚುರಪಡಿಸಲು ಸಹಕಾರಿಯಾಯಿತು.




ಟ್ಯಾಕ್ಸಿ ಕಂಪನಿಯಿಂದ ಆರಂಭವಾದ ಜಿ.ಎಸ್.ಪ್ರಶಾಂತ್ ಅವರ ಪ್ರಯಾಣ ಟ್ರಾವೆಲ್ ಏಜನ್ಸಿಯವರೆಗೂ ಬಂತು. ಪ್ರವಾಸೋದ್ಯಮದ ವಿಷಯದಲ್ಲಿ ತೀಕ್ಷ್ಣ ಮುಂದಾಲೋಚನೆಯುಳ್ಳ ಪ್ರಶಾಂತ್ ಅವರು ಜನರ ನಾಡಿಮಿಡಿತ ಅರಿತು ಅದಕ್ಕೆ ತಕ್ಕಂತೆ ಸೇವೆ ನೀಡುವುದರಲ್ಲಿ ನಿಸ್ಸೀಮರು. ಮೈಸೂರಿನಲ್ಲಿ ಪ್ರವಾಸೋದ್ಯಮದ ಅಭಿವೃದ್ಧಿಗಿದ್ದ ಅವಶ್ಯಕತೆಯನ್ನು ಮೊದಲೇ ಮನಗಂಡು ಆ ನಿಟ್ಟಿನಲ್ಲಿ ಕೆಲಸ ಮಾಡುತ್ತಿರುವ ಇವರು ಇತರ ಕ್ಷೇತ್ರಗಳತ್ತ ಸಹ ಗಮನ ಹರಿಸಿದ್ದಾರೆ. ಮೈಸೂರಿನಲ್ಲಿ ಉತ್ತಮ ಹೂಡಿಕೆಗೆ ಅವಕಾಶವಾಗುವಂತೆ **ಅಲಯನ್ಸ್ ಸ್ಕ್ವೇರ್** ಹಾಗೂ **ಪ್ರಾಪರ್ಟೀಸ್ ಇನ್ ಮೈಸೂರು** ಎಂಬ ಸಂಸ್ಥೆಗಳನ್ನು ಆರಂಭಿಸಿದ್ದಾರೆ.




ಹೊಸತನಕ್ಕೆ ಸದಾ ತುಡಿಯುವ ಮನೋಭಾವವುಳ್ಳ ಜಿ.ಎಸ್.ಪ್ರಶಾಂತ್ ಭಾರತದಲ್ಲೇ ಮೊದಲ ಬಾರಿಗೆ ಮೈಸೂರಿನಲ್ಲಿ 2017ರಲ್ಲಿ **ಓಪನ್ ಜೀಪ್ ಟೂರ್ಸ್** ಆರಂಭಿಸಿದರು. ಪ್ರವಾಸಿಗರು ಮೈಸೂರಿನ ಸೌಂದರ್ಯವನ್ನು ವಿಭಿನ್ನ ರೀತಿಯಲ್ಲಿ ಕಣ್ತುಂಬಿಕೊಳ್ಳುವಂತೆ ಮಾಡುವ ಸಲುವಾಗಿ ಇಟ್ಟ ಹೆಜ್ಜೆ ಇದು. ನಗರದ ಪ್ರಮುಖ ಪ್ರೇಕ್ಷಣೀಯ ಸ್ಥಳಗಳನ್ನು ಓಪನ್ ಜೀಪ್‌ನಲ್ಲಿ ಕೂತು ಸವಿಯುವ ಪರಿಕಲ್ಪನೆಯೇ ಅದ್ಭುತ. ಅದನ್ನು ಸಾಧ್ಯವಾಗಿಸಿದ ಕೀರ್ತಿ ಪ್ರಶಾಂತ್ ಅವರಿಗೆ ಸಲ್ಲುತ್ತದೆ. ಇದಕ್ಕೆ ಅಭೂತಪೂರ್ವ ಪ್ರತಿಕ್ರಿಯೆ ಸಹ ದೊರೆಯಿತು.



ಮೈಸೂರಿನಲ್ಲಿ ಕಾರ್ಪೊರೇಟ್ ಕಾರ್ಯಕ್ರಮಗಳ ಆಯೋಜನೆಗೆ ಅನುಕೂಲವಾಗುವಂತೆ ಜಿ.ಎಸ್.ಪ್ರಶಾಂತ್ **ಸೆಂಟರ್ ಸ್ಟೇಜ್ ಇವೆಂಟ್ಸ್** ಎಂಬ ಇವೆಂಟ್ ಮ್ಯಾನೇಜ್‌ಮೆಂಟ್ ಸಂಸ್ಥೆಯನ್ನು ಹುಟ್ಟುಹಾಕಿದರು. ನಗರದ ಪ್ರಮುಖ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಆಯೋಜಿಸಿದ ಹೆಗ್ಗಳಿಕೆ ಈ ಸಂಸ್ಥೆಗಿದೆ. **ಓಪನ್ ಸ್ಟ್ರೀಟ್ ಫೆಸ್ಟಿವಲ್, ಮೈಸೂರು ಎಜುಕೇಶನ್ ಫೇರ್, ಮೈಸೂರು ಟ್ರಾವೆಲ್ ಮಾರ್ಟ್, ಮೈಸೂರು ಶಾಪಿಂಗ್ ಫೆಸ್ಟಿವಲ್** ಮತ್ತಿತರ ಪ್ರಮುಖ, ನವೀನ, ಅದ್ಭುತ ಕಾರ್ಯಕ್ರಮಗಳು ಆಯೋಜನೆಯಾದದ್ದು ಸೆಂಟರ್ ಸ್ಟೇಜ್‌ನಿಂದಲೇ.



ವಿಶ್ವ ಯೋಗ ದಿನಾಚರಣೆಯಂದು ಒಂದೇ ಸ್ಥಳದಲ್ಲಿ ಅತಿಹೆಚ್ಚು ಜನರು ಸೇರಿ ಯೋಗ ಪ್ರದರ್ಶನ ಮಾಡಿದ್ದರಿಂದ ಮೈಸೂರು ಗಿನ್ನಿಸ್ ಪುಸ್ತಕದಲ್ಲಿ ದಾಖಲೆ ಬರೆದಿತ್ತು. ಗಿನ್ನಿಸ್ ದಾಖಲೆಯಿಂದಾಗಿ ಮೈಸೂರು ವಿಶ್ವಮಟ್ಟದಲ್ಲಿ ಸುದ್ದಿಯಾಯಿತು. ಈ ಬೃಹತ್ ಕಾರ್ಯಕ್ರಮ ಆಯೋಜನೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದು ಬಿ.ಎಸ್.ಪ್ರಶಾಂತ್ ಅವರೇ.



ಮೈಸೂರಿನ ಸರ್ವತೋಮುಖ ಬೆಳವಣಿಗೆಗೆ ಬಿ.ಎಸ್.ಪ್ರಶಾಂತ್ ಒಂದಿಲ್ಲೊಂದು ರೀತಿಯಲ್ಲಿ ಶ್ರಮಿಸುತ್ತಿರುತ್ತಾರೆ. ಮೈಸೂರು ನಗರ ಸ್ವಚ್ಛವಾಗಿದ್ದರೆ, ದೇಶದ ಅತ್ಯಂತ ಸ್ವಚ್ಛ ನಗರವಾಗಿ ಹೆಸರುವಾಸಿಯಾದರೆ ಇನ್ನಷ್ಟು ಪ್ರವಾಸಿಗರು ಮೈಸೂರಿನತ್ತ ಬರುತ್ತಾರೆ. ಮಾತ್ರವಲ್ಲದೆ, ಇಡೀ ದೇಶಕ್ಕೆ ನಮ್ಮ ನಗರ ಮಾದರಿಯಾಗುತ್ತದೆ ಎಂಬುದನ್ನು ನಂಬಿರುವ ಪ್ರಶಾಂತ್, ಮೈಸೂರನ್ನು ಎಲ್ಲ ರೀತಿಯಿಂದಲೂ ಮಾದರಿ ನಗರವನ್ನಾಗಿ ಮಾಡಲು 2012ರಲ್ಲಿ **ಲೆಟ್ಸ್ ಡೂ ಇಟ್, ಮೈಸೂರು** ಸಂಸ್ಥೆಯನ್ನು ಸ್ಥಾಪಿಸಿದರು. ಈ ಸಂಸ್ಥೆಯು ಹತ್ತಾರು ಸಮಾಜಮುಖಿ ಕಾರ್ಯಕ್ರಮಗಳನ್ನು ನಡೆಸುತ್ತಾ ಬಂದಿದೆ. ಅವುಗಳಲ್ಲಿ ಪ್ರಮುಖವಾದುವೆಂದರೆ,

ಇಡೀ ನಗರವನ್ನು ಸ್ವಚ್ಛಗೊಳಿಸಲು ಬೃಹತ್ ಸ್ವಚ್ಛತಾ ಅಭಿಯಾನ

ಮನೆಮನೆಗಳಲ್ಲಿ ಹಸಿ ಹಾಗೂ ಒಣಕಸಗಳನ್ನು ಬೇರ್ಪಡಿಸುವ ಪರಿಕಲ್ಪನೆ ಬಿತ್ತರ

ಸಾರ್ವಜನಿಕರಿಗೆ ಪರಿಸರ ಸ್ನೇಹಿ ಗಣಪತಿ ಮೂರ್ತಿ ವಿತರಣೆ



ಜಿ.ಎಸ್.ಪ್ರಶಾಂತ್ ಅವರು ಮಾನ್ಯ ಪ್ರಧಾನಿ ಶ್ರೀ ನರೇಂದ್ರ ಮೋದಿ ಅವರನ್ನು ಭೇಟಿಯಾದ ಸಂದರ್ಭ. ಮೈಸೂರನ್ನು ದೇಶದ ಸ್ವಚ್ಛನಗರಿಯನ್ನಾಗಿ ಮಾಡಲು ಲೆಟ್ಸ್ ಡೂ ಇಟ್. ಮೈಸೂರು ಸಂಸ್ಥೆಯು ಮಾಡುತ್ತಿರುವ ಪ್ರಯತ್ನವನ್ನು ಗುರುತಿಸಿ ಸ್ವತಃ ಪ್ರಧಾನಿಯವರೇ ಜಿ.ಎಸ್.ಪ್ರಶಾಂತ್ ಅವರನ್ನು ಅಭಿನಂದಿಸಿದರು.




ಪ್ರವಾಸೋದ್ಯಮ ಅಭಿವೃದ್ಧಿಗೆ ವಿಮಾನ ನಿಲ್ದಾಣದ ಪ್ರಾಮುಖ್ಯತೆ ಎಷ್ಟು ಎಂಬುದನ್ನು ಅರಿತಿದ್ದ ಜಿ.ಎಸ್.ಪ್ರಶಾಂತ್, ಮೈಸೂರು ವಿಮಾನ ನಿಲ್ದಾಣ ಸಲಹಾ ಸಮಿತಿಯ ಭಾಗವಾಗಿದ್ದರು. **ಸಮಿತಿಯ ಮೂಲಕ ಮೈಸೂರಿಗೆ ಏರ್‌ಪೋರ್ಟ್‌ನ ಅವಶ್ಯಕತೆ ಎಷ್ಟಿದೆ**, ವಿಮಾನ ಸಂಪರ್ಕದ ಅಭಾವದಿಂದ ನಗರದ ಪ್ರವಾಸೋದ್ಯಮಕ್ಕೆ, ಸರ್ವತೋಮುಖ ಅಭಿವೃದ್ಧಿಗೆ ಹಾಗೂ ಆರ್ಥಿಕತೆಗೆ ಏನೆಲ್ಲಾ ಸಮಸ್ಯೆಗಳಾಗುತ್ತಿವೆ ಎಂಬುದನ್ನು ತಿಳಿಸಿ ಹೇಳಿದರು. ಇದೆಲ್ಲದರ ಪರಿಣಾಮವಾಗಿ ಮೈಸೂರಿನಲ್ಲಿನ ವಿಮಾನ ನಿಲ್ದಾಣ ಸಕ್ರಿಯವಾಯಿತು.



2017ರ ವಿಶ್ವ ಪ್ರವಾಸೋದ್ಯಮ ದಿನದಂದು ಕೇಂದ್ರ ಪ್ರವಾಸೋದ್ಯಮ ಸಚಿವಾಲಯ, ಭಾರತ ಸರ್ಕಾರದ ವತಿಯಿಂದ ಸೇಫ್ ವ್ಹೀಲ್ಸ್ ಸಂಸ್ಥೆಯು ತಯಾರಿಸಿದ್ದ **ವಿಸಿಟ್ ಮೈಸೂರು** ಕಿರುಚಿತ್ರಕ್ಕೆ ರಾಷ್ಟ್ರ ಪ್ರಶಸ್ತಿ ದೊರೆತಿದ್ದು ಸಂಸ್ಥೆಯ ಇತಿಹಾಸದಲ್ಲಿ ಪ್ರಮುಖ ಮೈಲಿಗಲ್ಲು. ಮೈಸೂರಿನ ಸಾಂಸ್ಕೃತಿಕ ಶ್ರೀಮಂತಿಕೆಯನ್ನು, ಪರಂಪರೆಯನ್ನು ಪ್ರದರ್ಶಿಸಿದ್ದ ಈ ಚಿತ್ರ ವಿಶ್ವದಾದ್ಯಂತ ಪ್ರಸಿದ್ಧವಾಗಿದೆ.

ಜಿ.ಎಸ್.ಪ್ರಶಾಂತ್ ಅವರು **ವಿಸಿಟ್ ಮೈಸೂರು** ಎಂಬ ಮೊಬೈಲ್ ಅಪ್ಲಿಕೇಶನ್ ಸಹ ಆರಂಭಿಸಿದರು. ಹೊರಗಿನಿಂದ ಮೈಸೂರಿಗೆ ಬರುವ ಪ್ರವಾಸಿಗರಿಗೆ ಮೈಸೂರಿಗೆ ಸಂಬಂಧಪಟ್ಟಂತೆ ಎಲ್ಲ ಮಾಹಿತಿಯೂ ತಿಳಿಯಲು ತಯಾರಾದ ಅಪ್ಲಿಕೇಶನ್ ಇದು.




**ಪ್ರಶಸ್ತಿ ಮತ್ತು ಪುರಸ್ಕಾರಗಳು:**

ಅತ್ಯುತ್ತಮ ರಾಷ್ಟ್ರೀಯ ಪ್ರವಾಸೋದ್ಯಮ ಚಿತ್ರ (ವಿಶೇಷ ಪ್ರಶಸ್ತಿ)
ಚಿತ್ರ: ವಿಸಿಟ್ ಮೈಸೂರು.
ಮೈಸೂರಿನ ಭವ್ಯ ಪರಂಪರೆಯನ್ನು ಸಾರಿದ ಚಿತ್ರ

ಕೇರಳದ ಎಫ್‌ಯುಸಿಎ ಪ್ರಶಸ್ತಿ

ಜಾಹೀರಾತು ಉದ್ಯಮದಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿದ,
ತಮ್ಮ ಛಾಪಿನ ಮೂಲಕ ಹೊಸ ಅಲೆ ಮೂಡಿಸಿದ ಪ್ರಮುಖ,
ಕ್ರಿಯಾಶೀಲ ವ್ಯಕ್ತಿಗಳಿಗೆ ಹಾಗೂ ಸಂಸ್ಥೆಗಳಿಗೆ ನೀಡುವ ಪ್ರಶಸ್ತಿ.

ಅತ್ಯುತ್ತಮ ಪ್ರವಾಸೋದ್ಯಮ ಜಾಹೀರಾತು

ಎಫ್‌ಕೆಸಿಸಿಐ ವತಿಯಿಂದ ಕರ್ನಾಟಕ ಪ್ರವಾಸೋದ್ಯಮ ಕ್ಷೇತ್ರದವರಿಗೆ
ನೀಡುವ ಪ್ರಶಸ್ತಿ

ಕೌಟಿಲ್ಯ ವಿದ್ಯಾಲಯದ ವತಿಯಿಂದ ಯಶಸ್ವಿ ಸಾಧಕ ಪ್ರಶಸ್ತಿ

ಡಿಎಂಎಸ್ ಚಂದ್ರವನ ಆಶ್ರಮದ ವತಿಯಿಂದ ಕಾಯಕ ಸೇವಾ
ಧುರೀಣ ಪ್ರಶಸ್ತಿ

# ಮೈಸೂರು ಸಂಘ ಸಂಸ್ಥೆಗಳ ಒಕ್ಕೂಟ



ವಿವಿಧ ಸಂಘ-ಸಂಸ್ಥೆಗಳಲ್ಲಿ ಜಿ.ಎಸ್.ಪ್ರಶಾಂತ್ ಅವರ ಹುದ್ದೆಗಳು ಇಂತಿವೆ.

**ಅಧ್ಯಕ್ಷರು**
ಮೈಸೂರು ಸಂಘ-ಸಂಸ್ಥೆಗಳ ಒಕ್ಕೂಟ

**ಅಧ್ಯಕ್ಷರು**
ಮೈಸೂರು ಟ್ರಾವೆಲ್ ಮಾಲೀಕರ ವಿವಿಧೋದ್ದೇಶ ಸಹಕಾರ ಸಂಘ

**ಸಂಸ್ಥಾಪಕ ನಿರ್ದೇಶಕರು**
ಕರ್ನಾಟಕ ಟೂರಿಸಂ ಸೊಸೈಟಿ

**ಸದಸ್ಯರು**
ಮೈಸೂರು ವಿಮಾನ ನಿಲ್ದಾಣ ಸಲಹಾ ಸಮಿತಿ

**ಅಧ್ಯಕ್ಷರು**
ಲೆಟ್ಸ್ ಡೂ ಇಟ್, ಮೈಸೂರು



**ಅಧ್ಯಕ್ಷರು**
ಮೈಸೂರು ಟ್ರಾವೆಲ್ಸ್ ಅಸೋಸಿಯೇಷನ್

**ಮಾಜಿ ಉಪಾಧ್ಯಕ್ಷರು**
ಲಘು ಉದ್ಯೋಗ್ ಭಾರತಿ,
ಮೈಸೂರು ವಿಭಾಗ

**ಮಾಜಿ ಅಧ್ಯಕ್ಷರು**
ಅಂತಾರಾಷ್ಟ್ರೀಯ ಲಿಂಗಾಯತ್
ಯೂತ್ ಫೋರಂ, ಮೈಸೂರು ವಿಭಾಗ

**ಉಪಾಧ್ಯಕ್ಷರು**
ಬಸ್ ಮತ್ತು ಕಾರ್ ಆಪರೇಟರ್ಸ್
ಕಾನ್ಫೆಡರೇಷನ್ ಆಫ್ ಇಂಡಿಯಾ (BOCI)

**ಮಾಜಿ ಅಧ್ಯಕ್ಷರು**
ಸ್ಕಾಲ್ ಇಂಟರ್‌ನ್ಯಾಷನಲ್, ಮೈಸೂರು

**ಅಧ್ಯಕ್ಷರು**
ಮೈಸೂರು ಜಿಲ್ಲಾ ಜಿಮ್ನಾಸ್ಟಿಕ್ಸ್
ಅಸೋಸಿಯೇಷನ್

**ಉಪಾಧ್ಯಕ್ಷರು**
ಕರ್ನಾಟಕ ಟೂರಿಸಂ ಫೋರಂ,
ಮೈಸೂರು ಚಾಪ್ಟರ್

**ಗೌರವಾಧ್ಯಕ್ಷರು**
ಮೈಸೂರು ಟ್ಯಾಕ್ಸಿ ಮಾಲೀಕರು ಮತ್ತು
ಚಾಲಕರ ಸಂಘ

**ಖಜಾಂಚಿ**
ಮೈಸೂರು ಕ್ರಿಕೆಟ್ ಕ್ಲಬ್